# <u>ಸುರಭೀ ವೃದ್ಧಾಶ್ರಮ ಕಾರವಾರ</u>

## <u>Death Document:</u>







ಹೆಸರು: ಸುಮನ್ ಸಾವಂತ
ವಯಸ್ಸು: 63
ವಿಳಾಸ: ಹುಬ್ಬಳ್ಳಿ
ದಾಖಲಾದ ದಿನಾಂಕ: 21–11–2020
ಮರಣ ದಿನಾಂಕ: 24/02/2021
ಮರಣ ಸಮಯ: ರಾತ್ರಿ 11:30ಕ್ಕೆ
ವಿವರಣೆ:

ಈ ಮೇಲ್ಕಾಣಿಸಿದ ವಯೋವೃದ್ದರು ನ್ಯೂ ಮ್ಯಾದರ್ ಓನಿ ಹುಬ್ಬಳ್ಳಿಯ ಇವರು ಉತ್ತರಕನ್ನಡ ಜಿಲ್ಲೆಯ ಸದಾಶಿವಗಡನಲ್ಲಿರುವ ಸುರಭೀ ವೃದ್ಧಾಶ್ರಮದಲ್ಲಿ ದಿನಾಂಕ:21–11–2020 ರಿಂದ ಆಶ್ರಯ ಪಡೆದುಕೊಂಡಿದ್ದರು. ಇವರಿಗೆ ಕಿಡ್ನಿ ವೈಫಲ್ಯ ಜೊತೆಗೆ ವಯಸ್ಸು ಕೂಡಾ 63 ಆಗಿದ್ದರಿಂದ ವಯೋಸಹಜ ಖಾಯಿಲೆಯಿಂದ ಸಹ ಬಳಲಿದ್ದರು. ಇದರಿಂದ ಇವರು ದೈಹಿಕವಾಗಿ ತುಂಬಾ ಕುಗ್ಗಿ ಹೋಗಿದ್ದರು. ನಡೆದಾಡಲು ಆಗುತ್ತಿರಲಿಲ್ಲ. ದಿನಾಂಕ:24/02/2021 ರಂದು ರಾತ್ರಿ 11:03 ಗಂಟೆಯ ಸುಮಾರಿಗೆ ಇಹ ಲೋಕ ತ್ಯೆಜಿಸಿದರು. ಇವರ ಶವ ಸಂಸ್ಕಾರವನ್ನು ಸದಾಶವಗಡದ ಮುಕ್ತಿಧಾಮದಲ್ಲಿ ನೇರವೇರಿಸಲಾಯಿತು.

# ಜೂನ್–2020

## ರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ

ಸುರಭೀ ವೃದ್ಧಾಶ್ರಮ ಸದಾಶಿವಗಡ ಕಾರವಾರದಲ್ಲಿ ದಿನಾಂಕ ೨೧–೦೬–೨೦೨೦ರಂದು ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಾರಿದ್ದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಆಧೀಕ್ಷಕರು ಮಲ್ಲೇಶರವರು ಯೋಗದ ಪ್ರಾಮುಖ್ಯತೆ ಹಾಗೂ ಯೋಗದಿಂದಾಗುವ ಲಾಭಗಳ ಬಗ್ಗೆ ತಿಳಿಸಿದರು.

ಪ್ರತಿದಿನದ ಯೋಗ ಮಾಡುವುದರ ಜೊತೆಗೆ ಕುಮಾರಿ ಮೇಘರಾಣಿರವರು ಅಜ್ಜ–ಅಜ್ಜಿಯರಿಗೆ ಯೋಗವನ್ನು ಮಾಡಿಸಿದರು.





ಮೇಘರಾಣಿ ಅಜ್ಜ–ಅಜ್ಜಿಯರಿಗೆ ಯೋಗ ಹಾಗೂ ಪ್ರಾಣಾಯಾಮ ಹೇಳಿಕೋಡುತ್ತಿರುವುದು

# ಕರೋನಾ ವೈರಸ / ಕೋವಿಡ್–19 ಕುರಿತು ಜಾಗೃತಿ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ದಿನಾಂಕ: ೨೪–೦೪–೨೦೨೦ರಂದು ಶ್ರೀ ಸುರಭೀ ವೃದ್ಧಾಶ್ರಮದಲ್ಲಿ ಹಮ್ಮಿಕೋಳಲಾಗಿತ್ತು.ಈ ಕಾರ್ಯಕ್ರಮನ್ನು ಸ್ವಾಗತ ಭಾಷಣದೊಂದಿಗೆ ಆರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಾಗಿದ್ದರು.

ಕಾರ್ಯಕ್ರಮನ್ನು ಉದ್ದೇಶಿಸಿ ಸಂಸ್ಥೆಯ ವೈದ್ಯರಾದ ಡಾ॥ ವಿಜಯರಾಜ್ ಅವರು ಮಾತನಾಡಿದರು ಹಾಗೂ ಆಜ್ಜ ಆಜ್ಜಿಯರಿಗೆ ಕರೋನಾ ವೈರಸಿನ ಬಗ್ಗೆ ಮಾಹಿತಿ ನೀಡಿದರು. ಅದು ಹೇಗೆಂದರೆ ಕರೋನಾ ಎನ್ನುವ ವೈರಸ ಇದು ಮೊದಲ ಚೀನಾ ದೇಶದಲ್ಲಿ ಕಾಣಿಸಿ ಕೊಂಡಿದ್ದು ವೈರಸ್‌ನಿಂದ ಕೋವಿಡ್–೧೯ ಎನ್ನುವ ರೋಗ ಬರುತ್ತದೆ. ಇದು ಒಂದು ಸಾಂಕ್ರಾಮಿಕ ರೋಗವಾಗಿದೆ ಇದಕ್ಕೆ ಔಷದಿಯನ್ನು ಇನ್ನು ಕಂಡು ಹಿಡಿದಿಲ್ಲ. ಆ ಕಾರಣದಿಂದಾಗಿ ಈ ರೋಗವನ್ನು ತಡೆಗಟ್ಟಲು ನಮ್ಮ ಕೇಂದ್ರದಲ್ಲಿ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವೈರಸನ್ನ ತಡೆಗಟ್ಟುವ ಕ್ರಮಗಳ ಬಗ್ಗೆ ಮಾಹಿತಿ ನೀಡಿ, ಮಾಸ್ಕಗಳನ್ನು ವಿತರಿಸಿ, ಕೈಗಳನ್ನು ಸೇನಿಟೈಜರನಿಂದ ಅಥವಾ ಸಾಬೂನಿನಿಂದ ದಿನಕ್ಕೆ 4ರಿಂದ 5 ಸಲ ತೊಳೆದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಕೊನೆಯದಾಗಿ ಆಶ್ರಮದಲ್ಲಿ ಇರುವ ಎಲ್ಲ ಅಜ್ಜ–ಅಜ್ಜಿಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ Covid-19 test ಮಾಡಲಾಯಿತು.









Covid-19 test ಮಾಡಿಸುತ್ತಿರುವುದು

## **ದಾನಿಗಳ ಹುಟ್ಟು–ಹಬ್ಬದ ಆಚರಣೆ:**

ಸುರಭೀ ವೃದ್ಧಾಶ್ರಮ ಸದಾಶಿವಗಡ ಕಾರವಾರದಲ್ಲಿ ದಾನಿಗಳು ತಮ್ಮ ಹುಟ್ಟು ಹಬ್ಬವನ್ನು ಅಜ್ಜ–ಅಜ್ಜಿಯರ ಜೊತೆಗೆ ಆಚರಿಸಿಕೊಂಡರು. ಅವರು ಅಜ್ಜ–ಅಜ್ಜಿಯರಿಗೆ ಉಡುಗೊರೆ ಹಾಗೂ ಕೇಕ್‌ಗಳನ್ನು ನೀಡಿದರು.

ಅಜ್ಜ ಅಜ್ಜಿಯರು ಅವರಿಗೆ ಆಶೀರ್ವಾದ ಮಾಡಿದರು ಹಾಗೂ ಮೆಚ್ಚುಗೆ ಮಾತುಗಳನ್ನು ಆಡಿದರು. ತಮ್ಮ ಸ್ವಂತ ಮಕ್ಕಳು ಹಾಗೂ ಕುಟುಂಬದವರಿಗೆ ನಾವು ಬೇಡ ಆಗಿದ್ದೇವೆ. ಆದರೆ ನಿಮ್ಮಂತವರು ನಮಗೆ ಕಾಳಜಿ ತೋರಿಸುತ್ತಿರುವುದು ನಮಗೆ ಖುಷಿಯನ್ನು ತಂದುಕೊಟ್ಟಿದೆ. ದೇವರು ನಿಮಗೆ ಚೆನ್ನಾಗಿ ಇಡಲಿ ಎಂದು ನಾವು ದೇವರಲ್ಲಿ ಪ್ರಾರ್ಥನೆ ಮಾಡುತ್ತೇವೆ ಎಂದು ಹೇಳಿದರು.



**ಕೇಕ್ ಕಟ್ ಮಾಡುತ್ತಿರುವುದು.**



**ಅಜ್ಜ–ಅಜ್ಜಿಯರಿಗೆ ಕೇಕ್ ಹಾಗೂ ಉಡುಗೊರೆ ನೀಡುತ್ತಿರುವುದು**

# ರಾಷ್ಟ್ರೀಯ ಹಬ್ಬಗಳ ಆಚರಣೆ:

ಸುರಭೀ ಸದಾಶಿವಗಡ ಕಾರವಾರದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲಾಯಿತು. ವೃದ್ಧರು ಸಂತೋಷದಿಂದ ಕಾರ್ಯಕ್ರಮಕ್ಕೆ ಬೇಕಾದ ಎಲ್ಲಾ ತಯಾರಿಗಳನ್ನು ಮಾಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಮಹಾಲಕ್ಷ್ಮೀ ಅವರು ಪ್ರಾರ್ಥನೆಯನ್ನು ಮಾಡಿದರು. ಮಲ್ಲೇಶ ಅವರು ಪೂಜೆಮಾಡಿ ಸ್ವಾಗತ ಭಾಷಣದೊಂದಿಗೆ ಆರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಾಗಿದ್ದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮೊದಲಿಗೆ ಹಾಲೇಶರವರು ಮಾತನಾಡಿದರು ನಂತರ ಅಧೀಕ್ಷಕರು ಮಲ್ಲೇಶ ಅವರು ಸ್ವಾತಂತ್ರಕ್ಕಾಗಿ ಹೋರಾಟ ಮಾಡಿ ತಮ್ಮ ಪ್ರಾಣವನ್ನು ನೀಡಿದವರ ಬಗ್ಗೆ ಅವರ ವಿಚಾರಗಳು, ತತ್ವಗಳು, ಜೀವನ ಶೈಲಿಯನ್ನು ಕುರಿತು ವಿವರಿಸಿದರು. ಅವರು ಮಾಡಿರುವ ಸತ್ಯಾಗ್ರಹಗಳ ಬಗ್ಗೆ ತಿಳಿಸಿದರು.

ಈ ಕಾರ್ಯಕ್ರಮವನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.



**ಪೂಜೆಗೆ ತಯಾರಿ ಮಾಡಿರುವುದು**



**ಸಿಬ್ಬಂದಿ ವರ್ಗದವರು ಹಾಗೂ ವೃದ್ಧರು**

# ಹೊಸ ವರ್ಷದ ಆಚರಣೆ:

ಸುರಭೀ ವೃದ್ಧಾಶ್ರಮ ಸದಾಶಿವಗಡ ಕಾರವಾರದಲ್ಲಿ ದಿನಾಂಕ:01–01–2021 ಹೊಸ ವರ್ಷದ ಆಚರಣೆಯನ್ನು ಮಾಡಲಾಯಿತು. ಎಲ್ಲ ಸಿಬ್ಬಂದಿಗಳು ಹಾಗೂ ಅಜ್ಜ ಅಜ್ಜಿಯರು ಕಾರ್ಯಕ್ರಮಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿದರು.

ಎಲ್ಲಾ ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಹಳೆಯದನ್ನು ಮರೆತು ಹೊಸ ಜೀವನವನ್ನು ಪ್ರಾರಂಭಿಸಿ ಎಂದು ಹೇಳಿದರು.

ನಿಮಗೆ ಯಾರು ಇಲ್ಲ ಎಂದು ಯಾವತ್ತು ಅಂದುಕೋಳ್ಳಬೇಡಿ ನಿಮಗೆ ನಾವು ಇದ್ದೀವಿ. ನಮಗೆ ನೀವು ಭಾರವಲ್ಲ ಎಂದು ಹೇಳಿದರು.




ಕೇಕ್ ಕತ್ತರಿಸುತ್ತಿರುವುದು



ಅಜ್ಜ ಅಜ್ಜಿಯರು ಕುಳಿತುಕೊಂಡಿರುವುದು